**ಸಿ.ಸಿ. ಸಂಖ್ಯೆ 6644 / 2024**
**ಪಿ.ಡಬ್ಲೂ-01**

**ದಿನಾಂಕಃ 26.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ- ಶ್ರೀ SVS. ಆರೋಪಿ ಪರ ವಕೀಲರಿಂದ .**

ಏನು ಕೆಲಸ ಮಾಡುತ್ತೀರಿ ಎಂದರೆ ಸಾಕ್ಷಿ ಟೈಲರ್ ಕೆಲಸ ಎಂದು ನುಡಿಯುತ್ತಾರೆ. ಸದರಿ ಟೈಲರ್ ಕೆಲಸದಿಂದ ನಿಮಗೆ ತಿಂಗಳು ಎಷ್ಟು ಆದಾಯ ಇದೆ ಎಂದರೆ ಸಾಕ್ಷಿಯು 20-25 ಸಾವಿರ ಎಂದು ನುಡಿಯುತ್ತಾರೆ. ಸದರಿ ಟೈಲರಿಂಗ್ ಆದಾಯ ಬಿಟ್ಟರೆ ನಿಮಗೆ ಬೇರೆ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸಾಕ್ಷಿಯು ಗುಡೇಪಾಳ್ಯ ಊರಿನಲ್ಲಿ ಸುಮಾರು 15 ಎಕರೆ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನಲ್ಲಿ ಏನು ಬೆಳೆ ಬೆಳೆಯುತ್ತೀರಿ ಎಂದರೆ ಸಾಕ್ಷಿ ರಾಗಿ ಮತ್ತು ಎಲ್ಲಾ ಧಾನ್ಯಗಳನ್ನು ಬೆಳೆಯುತ್ತೇವೆ ಎಂದು ನುಡಿಯುತ್ತಾರೆ. ಸದರಿ 15 ಎಕರೆ ಜಮೀನು ನಿಮ್ಮ ಹೆಸರಿಗೆ ಇರುವುದರ ಬಗ್ಗೆ ದಾಖಲೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ನನ್ನ ಹೆಸರಿಗೆ ಸ್ವಲ್ಪ ಜಮೀನು ಇದ್ದು ಇನ್ನು ಕೆಲವು ಜಮೀನುಗಳು ನನ್ನ ಚಿಕ್ಕಪ್ಪರವರ ಹೆಸರಿನಲ್ಲಿ ಇರುತ್ತವೆಆದರೆ ದಾಖಲೆ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನಿನಿಂದ ನಿಮಗೆ ವಾರ್ಷಿಕ ಎಷ್ಟು ಆದಾಯ ಬರುತ್ತದೆ ಎಂದರೆ ಸಾಕ್ಷಿಯು ಸುಮಾರು 5 ಲಕ್ಷ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಟೈಲರಿಂಗ್ ಮತ್ತು ಪ್ರಾಪರ್ಟಿ ಪ್ರಕಾರ ಯಾವುದೇ ಆದಾಯ ಇರುವುದಿಲ್ಲವಾ ಎಂದರೆ ಸಾಕ್ಷಿ ಬೆಂಗಳೂರಿನಲ್ಲಿ ಮನೆ ಇದೆ ಎಂದು ನುಡಿಯುತ್ತಾರೆ. ಸದರಿ ಮನೆಯು ನಿಮ್ಮ ಹೆಸರಿನಲ್ಲಿ ಇದೆಯೆ ಹಾಗೂ ಬಾಡಿಗೆ ಬರುತ್ತದೆಯೆ ಎಂದರೆ ಸಾಕ್ಷಿ ಹೌದು ನನ್ನ ಹೆಸರಿನಲ್ಲಿ ಇದ್ದು ರೂ.35 ಸಾವಿರ ಬಾಡಿಗೆ ಬರುತ್ತದೆ ಎಂದು ನುಡಿಯುತ್ತಾರೆ. ಆ ಸಂಬಂಧ ನೀವು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ನಿಮಗೆ ಯಾವಾಗಿನಿಂದ ಪರಿಚಯ ಎಂದರೆ ಸಾಕ್ಷಿ 2023 ರಿಂದ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ನಾವು ಮೊದಲು ಕಮಲಾ ನಗರದಲ್ಲಿ ಇದ್ದೆವು, ಬಸವೇಶ್ವರ ನಗರದಲ್ಲಿ ಹಾಸ್ಟಲ್ ಇದ್ದು ಆರೋಪಿಯು ಹಾಸ್ಟೆಲ್ ನಲ್ಲಿ ಅಡುಗೆಯನ್ನು ಮಾಡುತ್ತಾರೆ, ಸಾಕ್ಷಿ ಮುಂದುವರೆದು ನನ್ನ ಸ್ನೇಹಿತರಾದ ಮೀನಮ್ಮ ಎಂಬುವವರು ಸದರಿ ಹಾಸ್ಟೆಲ್ ಎದುರುಗಡೆ ಹಾಲಿನ ವ್ಯಾಪಾರ ಮಾಡುತ್ತಾರೆ, ಅಲ್ಲಿಂದ ಪರಿಚಯ ಎಂದು ನುಡಿಯುತ್ತಾರೆ. ಸದರಿ ಮೀನಮ್ಮ ರವರಿಂದ ನಿಮಗೆ ಆರೋಪಿಯು ಪರಿಚಯನ ಎಂದರೆ ಸಾಕ್ಷಿ ಇಲ್ಲ ನಾನು ವ್ಯಾಪಾರ ಮಾಡಲು ಹೋದಾಗ ಆರೋಪಿಯು ನನಗೆ ಕಾಂಟ್ಯಾಕ್ಟ್ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮೀನಮ್ಮ ರವರು ಆರೋಪಿಯನ್ನು ಪರಿಚಯ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಆರೋಪಿಯು ನಿಮ್ಮ ಹತ್ತಿರ ಹಣ ಕೇಳಿರುತ್ತಾರೆ ಎಂದು ಹೇಳಿದ್ದು ಆರೋಪಿ ಒಬ್ಬರೆ ಬಂದಿದ್ದರ ಅಥವಾ ಅವರ ಜೊತೆ ಸದರಿ ಮೀನಾಕ್ಷಮ್ಮ ಬಂದಿದ್ದರ ಎಂದರೆ ಸಾಕ್ಷಿ ಆರೋಪಿ ಒಬ್ಬರೇ ಬಂದಿದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ನೀವು ಯಾವ ದಿನಾಂಕದಂದು ರೂ.6ಲಕ್ಷ ಹಣವನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ದಿನಾಂಕ 16.02.2024 ರಂದು ಎಂದು ನುಡಿಯುತ್ತಾರೆ. ಸದರಿ ಹಣವನ್ನು ಎಲ್ಲಿ ಆರೋಪಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಹಾಸ್ಟೆಲ್ ಹತ್ತಿರ ಎಂದು ನುಡಿಯುತ್ತಾರೆ. ಸದರಿ ಹಾಸ್ಟಲ್ ಹೆಸರು ಏನು ಎಂದರೆ ಸಾಕ್ಷಿ ನನಗೆ ಅಷ್ಟಾಗಿ ಗೊತ್ತಿರುವುದಿಲ್ಲ ಆದರೆ ಶಾನುಭೋಗ ಎಂದು ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ರೂ.6 ಲಕ್ಷ ಹಣವನ್ನು ನೀವು ಒಂದೇ ದಿನ ನಗಧಾಗಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಹಣವನ್ನು ಕೊಡುವಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನಾನು ಮತ್ತು ಆರೋಪಿ ಇಬ್ಬರೆ ಇದ್ದೆವು ಎಂದು ನುಡಿಯುತ್ತಾರೆ. ಯಾವ ಮುಖಬೆಲೆಯ ನೋಟನ್ನು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಎಲ್ಲಾ 500

ಮುಖಬೆಲೆಯ ನೋಟನ್ನು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಸದರಿ ರೂ. 6 ಲಕ್ಷ ಹಣವನ್ನು ಚೆಕ್ ಮತ್ತು ಅಕೌಂಟ್ ಟ್ರಾನ್ಸರ್ ಹಾಗೂ ಡಿಡಿ ಮೂಲಕ ನೀಡಲು ತೊಂದರೆ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ಇದ್ದಿರಲಿಲ್ಲ ಆದರೆ ನನ್ನ ಬಳಿ ರೂ.20ಲಕ್ಷ ನಗಧು ಹಣ ಇತ್ತು ಆರೋಪಿಯು 2-3 ತಿಂಗಳಲ್ಲಿ ವಾಪಸ್ಸು ಕೊಡುತ್ತೇನೆ ಎಂದು ಹೇಳಿದ್ದರಿಂದ ನಗಧು ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮಗೆ ಸದರಿ ರೂ. 6 ಲಕ್ಷ ಹಣ ಕೊಡುವಷ್ಟು ಸಾಮರ್ಥ್ಯ ಇರುವುದಿಲ್ಲ ಹಾಗೂ ನಿಮ್ಮ ಬಳಿ ಅಷ್ಟು ಹಣ ಇದ್ದಿರಲಿಲ್ಲ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. ಹಣವನ್ನು ಕೊಟ್ಟಾಗ ಯಾವುದಾದರೂ ದಾಖಲೆ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಕಾರಣ ಭರವಸೆಯ ಮೇಲೆ ಕೊಟ್ಟಿರುತ್ತೇನೆ ಆದರೆ ದಿನಾಂಕ 24.05.2024 ರಂದು ನನಗೆ ಚೆಕ್ ಅನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಆರೋಪಿಗೆ ಇದೇ ಮೊದಲು ಸದರಿ ರೂ. 6 ಲಕ್ಷ ಹಣವನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಅದಕ್ಕೂ ಮೊದಲು ರೂ. 20 ಮತ್ತು 50 ಸಾವಿರ ಹಣವನ್ನು ಪಡೆದುಕೊಂಡು ವಾಪಸ್ಸು ಕೊಡುತ್ತಿದ್ದರು ಎಂದು ನುಡಿಯುತ್ತಾರೆ. ಯಾವ ವರ್ಷದಿಂದ ನಿಮ್ಮ ಬಳಿ ರೂ. 20 ಮತ್ತು 50 ಸಾವಿರ ಪಡೆಯುತ್ತಿದ್ದರು ಎಂದರೆ ಸಾಕ್ಷಿ 2023 ರಲ್ಲಿ ಎಂದು ನುಡಿಯುತ್ತಾರೆ.

ಆರೋಪಿಯು ದಿನಾಂಕ 05.12.2022 ರಂದು ರೂ.95ಸಾವಿರ ಹಣವನ್ನು ನಿಮ್ಮ ಬಳಿ ಸಾಲ ಕೇಳಿದ್ದರು ಎಂದರೆ ಸಾಕ್ಷಿಯು ಸುಳ್ಳು ಎಂದು ನುಡಿಯುತ್ತಾರೆ. ನೀವು ಸದರಿ ರೂ.95ಸಾವಿರ ಹಣವನ್ನು ಸದರಿ ಮೀನಾಕ್ಷಮ್ಮ ರವರ ಸಮಕ್ಷಮ ನಿಮ್ಮ ಸೆಲ್ಪ್ ಚೆಕ್ ಮುಖಾಂತರ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನಾನು ಆರೋಪಿಗೆ ಕೊಟ್ಟಿರುವುದಿಲ್ಲ ಮೀನಾಕ್ಷಮ್ಮ ರವರಿಗೆ ಕೊಟ್ಟಿರುತ್ತೇನೆ ಅವರಿಗೂ ಮತ್ತು ನನಗೂ ವ್ಯವಹಾರ ಇತ್ತು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಜೆರಾಕ್ಸ್ ಪ್ರತಿಯ ಚೆಕ್ ಅನ್ನು ತೋರಿಸಲಾಗಿ ಸದರಿ ಚೆಕ್ ನಿಮ್ಮದೆ ಎಂದರೆ

ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಚೆಕ್ ಅನ್ನು ಆರೋಪಿಯು ಡ್ರಾ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ಮೀನಾಕ್ಷಮ್ಮ ಮತ್ತು ಆರೋಪಿ ಏನು ಮಾಡಿರುತ್ತಾರೋ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮ್ಮ ಬಳಿ ಸದರಿ ದಿನಾಂಕ 05.12.2022 ರಂದು ರೂ.95ಸಾವಿರ ಹೊರತು ಪಡಿಸಿ ಬೇರೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ರೂ.95ಸಾವಿರ ಹಣವನ್ನು ಪಡೆದಾಗಿನಿಂದ ಆರೋಪಿಯು ನಿಮಗೆ ಬಡ್ಡಿಯನ್ನು ಕಟ್ಟುತಿದ್ದರು ಹಾಗೂ ಪೋನ್ ಪೇ ಮಾಡುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಪೋನ್ ಪೇ ಟ್ರಾನ್ಸಾಕ್ಷನ್ ತೋರಿಸಲಾಗಿ ಆರೋಪಿಯು ನಿಮ್ಮ ಮೊಬೈಲ್ ನಂಬರ್ ಗೆ ರೂ. 2500/-, 10,000/- 15,000/-, 2000/-, 10,000/-, 10,000/-, 10,000/- 30,000/-, 2500/-, 10,000/- ಹಣವನ್ನು ಪೋನ್ ಪೇ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿಯ ಹಾಸ್ಟೆಲ್ ನಲ್ಲಿ ಒಬ್ಬರು ಕೆಲಸ ಮಾಡುತ್ತಿದ್ದರು ಅವರಿಗೆ ಮೀನಾಕ್ಷಮ್ಮ ರವರು ನನ್ನ ಕಡೆಯಿಂದ ರೂ. 3 ಲಕ್ಷ ಹಣವನ್ನು ಕೊಡಿಸಿದ್ದರು ಸದರಿ ಹಣದ ಬಡ್ಡಿಗೆ ಆರೋಪಿಯು ನನಗೆ ಪೋನ್ ಪೇ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ಸದರಿ 3 ಲಕ್ಷ ಹಣಕ್ಕೆ ತಮ್ಮ ಪೋನ್ ಪೇ ಯಿಂದ ಬಡ್ಡಿ ಪಾವತಿ ಮಾಡುತ್ತಿದ್ದರು ಎಂಬುದರ ಬಗ್ಗೆ ಸದರಿ ಮೀನಾಕ್ಷಮ್ಮ ರವರ ವಿಚಾರಣೆ ಮಾಡಿಸುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಕಾರಣ ಅವರಿಗೆ ಆರೋಗ್ಯ ಸರಿ ಇರುವುದಿಲ್ಲ ಹಾಗೂ ಓಡಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಮೇಲೆ ಹೇಳಿದ ಹಣವನ್ನು ಅವರು ನಿಮ್ಮಿಂದ ಪಡೆದ ರೂ.95,000/- ಹಣಕ್ಕೆ ಬಡ್ಡಿಯಾಗಿ ಕೊಡುತ್ತಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ದಿನಾಂಕ 23.12.2023 ರಂದು ಆರೋಪಿಯು ಸದರಿ ರೂ.95,000/- ಹಣವನ್ನು ಸದರಿ ಮೀನಾಕ್ಷಮ್ಮ ರವರ ಸಮಕ್ಷಮ

ನಿಮಗೆ ವಾಪಸ್ಸು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-1ರ ಚೆಕ್ ಅನ್ನು ತೋರಿಸಲಾಗಿ ಸದರಿ ಚೆಕ್ ಅನ್ನು ನೀವು ಆರೋಪಿಯಿಂದ ಸದರಿ ರೂ. 95,000/- ಹಣದ ಭದ್ರತೆಗಾಗಿ ಪಡೆದುಕೊಂಡಿದ್ದು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ದಿನಾಂಕ 23.12.2023 ರಂದು ಸದರಿ ರೂ.95,000/- ಹಣವನ್ನು ಪಾವತಿ ಮಾಡಿದ್ದರು, ನೀವು ಭದ್ರತೆಗಾಗಿ ಕೊಟ್ಟಿದ್ದ ಚೆಕ್ಕನ್ನು ವಾಪಸ್ಸು ಕೊಡದೆ ರೂ. 6 ಲಕ್ಷಕ್ಕೆ ಬರೆದು ಹಾಕಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಮೀನಾಕ್ಷಮ್ಮ ರವರನ್ನು ನ್ಯಾಯಾಲಯಕ್ಕೆ ಕರೆಯಿಸಿ ವಿಚಾರಣೆ ಕೊಟ್ಟರೆ ಸತ್ಯಾಂಶ ಗೊತ್ತಾಗುತ್ತದೆ ಎಂದು ಕರೆಸಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಹಾಗೂ ಅವರಿಗೆ ಓಡಾಡಲು ಆಗುರವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ಯಾವುದೇ ಹಣವನ್ನು ಕೊಡುವ ಬಾದ್ಯತೆ ಇರುವುದಿಲ್ಲ ನೀವು ಅವರ ವಿರುದ್ದ ಸುಳ್ಳು ದೂರನ್ನು ಹಾಕಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**